# ಪತ್ರಿಕಾ ಪ್ರಕಟಣೆ

2018-19ನೇ ಸಾಲಿನಲ್ಲಿ ಸರ್ಕಾರಿ ಪ್ರೌಢಶಾಲೆಯ ಸಹ ಶಿಕ್ಷಕರ ತತ್ಸಮಾನ ವೃಂದದ ಶಿಕ್ಷಕರ ವರ್ಗಾವಣೆ ಸಂಬಂಧ ಮೈಸೂರು ವಿಭಾಗದ ಘಟಕದೊಳಗಿನ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹಾಗೂ ವಿಶೇಷ ಶಿಕ್ಷಕರ ಕೋರಿಕೆ ವರ್ಗಾವಣೆ, ಪರಸ್ಪರ ವರ್ಗಾವಣೆ ಹಾಗೂ ಸಹ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹಾಗೂ ವಿಶೇಷ ಶಿಕ್ಷಕ ವೃಂದದ ಕಡ್ಡಾಯ ವರ್ಗಾವಣೆಗಳ ಅಂತಿಮ ಆದ್ಯತಾ ಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಸದರಿ ಪಟ್ಟಿಯಲ್ಲಿನ ಶಿಕ್ಷಕರುಗಳಿಗೆ ಸ್ಥಳ ಆಯ್ಕೆಗಾಗಿ, ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರ ಕಛೇರಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಡಿ. ಸುಬ್ಬಯ್ಯ ರಸ್ತೆ, ಮೈಸೂರು ಇಲ್ಲಿ ಈ ಕೆಳಕಂಡಂತೆ ಕೌನ್ಸಿಲಿಂಗ್ ನಡೆಸಲಾಗುವುದು.

| ಕ್ರ ಸಂ. | ವೃಂದ | ಆದ್ಯತಾ ಕ್ರಮ ಸಂಖ್ಯೆ | ಕೌನ್ಸಿಲಿಂಗ್‌ಗೆ ಹಾಜರಾಗಬೇಕಾದ ದಿನಾಂಕ ಮತ್ತು ಸಮಯ |
|---|---|---|---|
| 01 | 1. ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1<br>2. ವಿಶೇಷ ಶಿಕ್ಷಕರು | 01 ರಿಂದ 526ರವರೆಗೆ<br>01 ರಿಂದ 234ರವರೆಗೆ | 26-08-2019<br>ಪೂರ್ವಾಹ್ನ 10-00 ಗಂಟೆಯಿಂದ |
| 02 | ಸರ್ಕಾರಿ ಪ್ರೌಢ ಶಾಲೆಯ ಸಹ ಶಿಕ್ಷಕರ ತತ್ಸಮಾನ ವೃಂದದ ಘಟಕದ ಒಳಗಿನ ಪರಸ್ಪರ ವರ್ಗಾವಣೆ ಕೌನ್ಸಿಲಿಂಗ್ | 01 ರಿಂದ 128 | 27-08-2019<br>ಪೂರ್ವಾಹ್ನ 10-00 ಗಂಟೆಯಿಂದ |
| 03 | ಕಡ್ಡಾಯ ವರ್ಗಾವಣೆ (ನಿಯಮ 21(4) ರಂತೆ) - ವಿಶೇಷ ವರ್ಗೀಕರಣದ ಹುದ್ದೆಗಳಲ್ಲಿನ ಶಿಕ್ಷಕರ ಪ್ರಕರಣಗಳಲ್ಲಿ 5 ವರ್ಷದ ಅವಧಿ ಪೂರ್ಣವಾಗಿರುವ ಹಾಗೂ 'ಎ' ವಲಯದಲ್ಲಿ 10 ವರ್ಷಗಳ ನಿರಂತರ ಸೇವೆಯನ್ನು ಪೂರೈಸಿರುವ ಶಿಕ್ಷಕರನ್ನು ವಲಯ 'ಎ' ದಿಂದ ವಲಯ 'ಸಿ' ಗೆ ಕಡ್ಡಾಯ ವರ್ಗಾವಣೆ ಕೌನ್ಸಿಲಿಂಗ್ - ಶೇ. 20ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾಯಿಸುವುದು. | ----- | 28-08-2019<br>ಪೂರ್ವಾಹ್ನ 10-00 ಗಂಟೆಯಿಂದ |
| 04 | ಕಡ್ಡಾಯ ವರ್ಗಾವಣೆ ಸೆಕ್ಷನ್ 3ಎ(1)(2)ರಂತೆ 'ಎ' ವಲಯದ ಶಿಕ್ಷಕರನ್ನು 'ಬಿ' ವಲಯಕ್ಕೆ ವರ್ಗಾವಣೆ ಕೌನ್ಸಿಲಿಂಗ್(ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು) ಹಾಗೂ 'ಎ' ವಲಯದ ಶಿಕ್ಷಕರನ್ನು 'ಸಿ' ವಲಯಕ್ಕೆ ವರ್ಗಾವಣೆಗಾಗಿ ಕೌನ್ಸಿಲಿಂಗ್ - ಶೇ. 20ಕ್ಕಿಂತಲೂ ಹೆಚ್ಚಿನ ಹುದ್ದೆಗಳು ಖಾಲಿ ಇರುವ ಘಟಕಕ್ಕೆ ಆದ್ಯತೆಯಲ್ಲಿ ವರ್ಗಾಯಿಸುವುದು.<br>1. ಸಹ ಶಿಕ್ಷಕರು | 01 ರಿಂದ 100<br>101 ರಿಂದ 200 | 29-08-2019<br>30-08-2019<br>ಪೂರ್ವಾಹ್ನ 10-00 ಗಂಟೆಯಿಂದ |
| | 1. ಸಹ ಶಿಕ್ಷಕರು<br>2. ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1<br>3. ವಿಶೇಷ ಶಿಕ್ಷಕರು | 201 ರಿಂದ 252<br>01 ರಿಂದ 35<br>01 ರಿಂದ 33 | 31-08-2019<br>ಪೂರ್ವಾಹ್ನ 10-00 ಗಂಟೆಯಿಂದ |

ಆದ್ದರಿಂದ ಮೇಲ್ಕಂಡಂತೆ ಸಂಬಂಧಿಸಿದ ಶಿಕ್ಷಕರು ಅವರಿಗೆ ಅನ್ವಯಿಸುವ ದಿನಾಂಕಗಳಂದು ಸ್ಥಳ ಆಯ್ಕೆಗಾಗಿ ಈ ಕೆಳಕಂಡ ದಾಖಲೆಗಳೊಡನೆ ಕೌನ್ಸಿಲಿಂಗ್‌ಗೆ ಸಕಾಲದಲ್ಲಿ ಹಾಜರಿರಲು ಸೂಚಿಸಿದೆ.

1. ಸಕ್ಷಮ ಪ್ರಾಧಿಕಾರದಿಂದ ಪಡೆದ ಸೇವಾ ದೃಢೀಕರಣ ಪತ್ರ (ಫೋಟೋ ಸಹಿತ)
2. ಆದ್ಯತೆ ಕೋರಿರುವ ಶಿಕ್ಷಕರು, ಕೋರಿರುವ ಆದ್ಯತೆಗೆ ನಿರ್ದಿಷ್ಟಪಡಿಸಿದ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಕಡ್ಡಾಯವಾಗಿ ಪರಿಶೀಲನೆಗೆ ಹಾಜರುಪಡಿಸತಕ್ಕದ್ದು.
3. ಅನ್ವಯವಾಗುವ ಇತರೆ ದಾಖಲೆಗಳು.

(ಹೆಚ್.ಎನ್. ಗೀತಾಂಬ)
ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ
ಜಂಟಿನಿರ್ದೇಶಕರು ಮತ್ತು ವರ್ಗಾವಣಾ ಪ್ರಾಧಿಕಾರಿ,
ಸಾ.ಶಿ.ಇಲಾಖೆ, ಮೈಸೂರು ವಿಭಾಗ, ಮೈಸೂರು 26/8/19

JDPi-2/CN/D/G4 Transfer/Transfer 2019/Paper notification